# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 271 |
| ಸದಸ್ಯರ ಹೆಸರು | : | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 11/12/2024 |
| ಉತ್ತರಿಸುವವರು ಸಚಿವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅಂಗವಿಕಲರ ಅಧಿನಿಯಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸರ್ಕಾರವು ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪ್ರತಿ ತಿಂಗಳ 3ನೇ ಸೋಮವಾರದಂದು ಅಂಗವಿಕಲರ ಕುಂದುಕೊರತೆ ಸಭೆಯನ್ನು ನಡೆಸಲು ಸುತ್ತೋಲೆಯನ್ನು ಹೊರಡಿಸಿರುವುದು ನಿಜವೇ ಇದ್ದಲ್ಲಿ; (ಅದರ ಪ್ರತಿಯನ್ನು ಒದಗಿಸುವುದು) | ಹೌದು.<br>"ರಾಜ್ಯದಲ್ಲಿ ಅಂಗವಿಕಲರ ಅಧಿನಿಯಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾಗೂ ರಾಜ್ಯದಲ್ಲಿರುವ ಅಂಗವಿಕಲರ ಕುಂದುಕೊರತೆಗಳನ್ನು ಶೀಘ್ರ ಇತ್ಯರ್ಥಗೊಳಿಸುವ ಉದ್ದೇಶದಿಂದ" ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪ್ರತಿ ತಿಂಗಳ 3ನೇ ಸೋಮವಾರದಂದು ಅಂಗವಿಕಲರ ಕುಂದುಕೊರತೆ ಸಭೆಯನ್ನು ನಡೆಸಲು ದಿನಾಂಕ:10.08.2007 ರಂದು ಸರ್ಕಾರದಿಂದ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ. (ಅನುಬಂಧ-1ರಲ್ಲಿ ಲಗತ್ತಿಸಿದೆ). |
| ಆ) | ಈ ಸುತ್ತೋಲೆಯ ಪ್ರಕಾರ ಪ್ರತಿ ತಿಂಗಳು ಅಂಗವಿಕಲರ ಕುಂದುಕೊರತೆಯ ಸಭೆಗಳನ್ನು ಜಿಲ್ಲಾಧಿಕಾರಿಗಳು ನಡೆಸುತ್ತಿದ್ದಾರೆಯೇ: ಇದ್ದಲ್ಲಿ ಕಳೆದ ಒಂದು ವರ್ಷದಲ್ಲಿ ಜಿಲ್ಲೆಗಳಲ್ಲಿ ನಡೆಸಿದ ಕುಂದುಕೊರತೆಗಳ ಸಭೆಯ ದಿನಾಂಕ ಮತ್ತು ಸಭೆಯ ವಿವರಗಳನ್ನು ನೀಡುವುದು; (ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಲ್ಲಿನ ವಿವರಗಳನ್ನು ಪ್ರತ್ಯೇಕವಾಗಿ ಸಭೆಯ ನಡವಳಿಯೊಂದಿಗೆ ಮಾಹಿತಿ ಒದಗಿಸುವುದು) | ಕಳೆದ ಒಂದು ವರ್ಷದಲ್ಲಿ ಪ್ರತಿ ತಿಂಗಳು ಜಿಲ್ಲಾಧಿಕಾರಿಗಳು ಆಯಾ ಜಿಲ್ಲೆಗಳಲ್ಲಿ ನಡೆಸಿದ ಅಂಗವಿಕಲರ ಕುಂದುಕೊರತೆಯ ಸಭೆಗಳ ದಿನಾಂಕ ಮತ್ತು ಸಭೆಗಳ ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ. |
| ಇ) | ಈ ಅಂಗವಿಕಲರ ಕುಂದು ಕೊರತೆಗಳ ಸಭೆಗಳನ್ನು ನಡೆಸುವುದಾಗಿ ನೆಪಮಾತ್ರವಾಗಿ ನೀಡುವುದು ಪ್ರಚಾರ ನೀಡಿ ಸಭೆಗಳನ್ನು ನಡೆಸದಿರುವುದು ಹಲವು ಸಂಘ/ ಸಂಸ್ಥೆಗಳ ಆರೋಪವಾಗಿದ್ದು, ಈ ಸರ್ಕಾರದ ಆದೇಶವನ್ನು ಕಡ್ಡಾಯವಾಗಿ ಪಾಲಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಮಾಹಿತಿ ನೀಡುವುದು) | ಕಳೆದ ಒಂದು ವರ್ಷದಲ್ಲಿ ಪ್ರತಿ ತಿಂಗಳು ಅಂಗವಿಕಲರ ಕುಂದುಕೊರತೆಯ ಸಭೆಗಳನ್ನು ಜಿಲ್ಲಾಧಿಕಾರಿಗಳು ಜಿಲ್ಲೆಗಳಲ್ಲಿ ನಡೆಸಿದ ಕುಂದುಕೊರತೆಗಳ ಸಭೆಯ ದಿನಾಂಕ ಮತ್ತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಜಿಲ್ಲಾ ಮಟ್ಟದ ಸಭೆಯನ್ನು ಏರ್ಪಡಿಸಲು ಅಗತ್ಯ ಕ್ರಮಕೈಗೊಳ್ಳಲು ಈ ಕಛೇರಿ ಪತ್ರ ದಿನಾಂಕ:14.11.2019, 07.08.2020 ಮತ್ತು 27.11.2023ರಲ್ಲಿ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಕೋರಲಾಗಿರುತ್ತದೆ. ಮುಂದುವರೆದು, ಸಭೆ ಏರ್ಪಡಿಸಲು ಅಗತ್ಯ ಕ್ರಮ ಕೈಗೊಳ್ಳಲು ಎಲ್ಲಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಈ ಕಛೇರಿಯ ಪತ್ರ ದಿನಾಂಕ:15.12.2020 ,02.08.2022, ರಲ್ಲಿ ಸೂಚನೆ ನೀಡಲಾಗಿರುತ್ತದೆ. |

**ಸಂಖ್ಯೆ:ಮಮಇ 291 ಪಿಹೆಚ್‌ಪಿ 2024**

**(ಲಕ್ಷ್ಮೀ. ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಇಲಾಖಾ ಸಚಿವರು

# ಅನುಬಂಧ -1

ಅಂಗವಿಕಲರ ಕುಂದು ಕೊರತೆಯ ಸಭೆಯನ್ನು ಏರ್ಪಡಿಸಿರುವ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಂದ ಸ್ವೀಕೃತವಾದ ಮಾಹಿತಿ.

| ಕ್ರ.ಸಂ. | ಜಿಲ್ಲೆಗಳು | ವಿವರ |
|---|---|---|
| 1 | ಬೆಂಗಳೂರು ನಗರ | ಕಳೆದ ಸಾಲಿನಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:06.03.2023, 17.07.2023, 28.08.2023 ಮತ್ತು 20.01.2024ರಂದು ಕುಂದು ಕೊರತೆಯನ್ನು ಸಭೆಯನ್ನು ಏರ್ಪಡಿಸಲಾಗಿರುತ್ತದೆ |
| 2 | ಬೆಂಗಳೂರು ಗ್ರಾಮಾಂತರ | ಮಾನ್ಯ ಜಿಲ್ಲಾಧಿಕಾರಿಗಳಿಂದ ಮೌಖಿಕವಾಗಿ ಅನುಮತಿ ಪಡೆದು ಮಾನ್ಯ ಜಿಲ್ಲಾಧಿಕಾರಿಗಳ ಅನುಪಸ್ಥಿತಿಯಲ್ಲಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖಾವತಿಯಿಂದ ದಿನಾಂಕ:16/09/2023 ಮತ್ತು ದಿನಾಂಕ:12.02.2024 ರಂದು ಕೊಠಡಿ ಸಂಖ್ಯೆ:03 ಜಿಲ್ಲಾಡಳಿತ ಭವನ, ನೆಲಮಹಡಿ ಬೀರಸಂದ್ರ ಗ್ರಾಮ, ಕುಂದಾಣ ಹೋಬಳಿ ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಕಲಚೇತನರ ಕುಂದು ಕೊರತೆಗಳನ್ನು ನಿವಾರಿಸಲು "ಜಿಲ್ಲಾ ಮಟ್ಟದ ವಿಕಲಚೇತನರ ಕುಂದು ಕೊರತೆ ಸಭೆ" ಯನ್ನು ನಡೆಸಲಾಗಿರುತ್ತದೆ. ಅದರಂತೆ ಜಿಲ್ಲೆಯ ಹಲವಾರು ವಿಕಲಚೇತನರು ಲಿಖಿತವಾಗಿ ಅಹವಾಲು ಸಲ್ಲಿಸಿ ಸೌಲಭ್ಯವನ್ನು ಪಡೆದಿರುತ್ತಾರೆ. ಹಾಗೂ ದಿನಾಂಕ:07.02.2024 ರಂದು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲಾಗಿದ್ದು, ಸದರಿ ಸಭೆಯಲ್ಲಿ ವಿಕಲಚೇತನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಹಲವಾರು ವಿಷಯಗಳನ್ನು ಚರ್ಚಿಸಿ ಪರಿಹಾರ ಕಂಡು ಕೊಳ್ಳಲಾಗಿರುತ್ತದೆ. ಹಾಗೂ ವಿಕಲಚೇತನರ ಮಾಸಾಶನ, ಗುರುತಿನ ಚೀಟಿ, ಶೇ.5ರ ಅನುದಾನ, ವಿಕಲಚೇತನರ ಮೇಲೆ ದೌರ್ಜನ್ಯ ಸೇರಿದಂತೆ ಅನೇಕ ಸಮಸ್ಯೆಗಳು ವಿವಿಧ ತಾಲ್ಲೂಕಿನಾದ್ಯಂತ ದೂರುಗಳು ಕೇಳಿ ಬರುತ್ತಿದ್ದ ಹಿನ್ನೆಲೆಯಲ್ಲಿ ತಾಲ್ಲೂಕು ಮಟ್ಟದಲ್ಲಿಯೇ ಪ್ರತಿ ತಿಂಗಳ 03ನೇ ಸೋಮವಾರ ವಿಕಲಚೇತನರ ಕುಂದು ಕೊರತೆ ಸಭೆ ನಡೆಸಲು ಮಾನ್ಯ ಜಿಲ್ಲಾಧಿಕಾರಿಗಳು ಸುತ್ತೋಲೆ ಹೊರಡಿಸಿರುತ್ತಾರೆ. |
| 3 | ಬೆಳಗಾವಿ | - |
| 4 | ಬಳ್ಳಾರಿ | ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಬಳಿ ಬಂದಂತೆ ವಿಕಲಚೇತನರ ಸಮಸ್ಯೆಗಳನ್ನು ಜಿಲ್ಲಾಧಿಕಾರಿಗಳ ಸೂಚನೆಯಂತೆ ಪರಿಶೀಲಿಸಿ, ಕ್ರಮವಹಿಸಲಾಗಿದ್ದು, ಗ್ರಾಮ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ವಿಕಲಚೇತನರಿಂದ ಬಂದಂತಹ ಸಮಸ್ಯೆಗಳನ್ನು ಖುದ್ದಾಗಿ ಪರಿಶೀಲಿಸಿ, ಕ್ರಮವಹಿಸಲಾಗಿದೆ.ಜಿಲ್ಲಾ ಮಟ್ಟದಲ್ಲಿ ಅಂಗವಿಕಲರ ಕುಂದು ಕೊರತೆ ಸಭೆ ನಡೆದಿರುವುದಿಲ್ಲ. |
| 5 | ಬೀದರ್ | ಬೀದರ್ ಜಿಲ್ಲೆಯಲ್ಲಿ ಕುಂದುಕೊರತೆ ಸಭೆ ನಡೆದಿರುವುದಿಲ್ಲ. |
| 6 | ವಿಜಯಪುರ | ಕಳೆದ ಸಾಲಿನಲ್ಲಿ ಕುಂದು ಕೊರತೆ ಸಭೆ ನಡೆದಿರುವುದಿಲ್ಲ. |
| 7 | ಬಾಗಲಕೋಟೆ | ದಿನಾಂಕ:29.08.2024ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಗಿರುತ್ತದೆ |
| 8 | ಚಿಕ್ಕಮಗಳೂರು | 2023-24ನೇ ಸಾಲಿನಲ್ಲಿ ಅಂಗವಿಕಲರ ಕುಂದು ಕೊರತೆ ಸಭೆಗಳು ನಡೆದಿರುವುದಿಲ್ಲ |
| 9 | ಚಿತ್ರದುರ್ಗ | 2023-24ನೇ ಸಾಲಿನಲ್ಲಿ ಅಂಗವಿಕಲರ ಕುಂದು ಕೊರತೆ ಸಭೆಗಳು ನಡೆದಿರುವುದಿಲ್ಲ. |
| 10 | ಚಾಮರಾಜನಗರ | ದಿನಾಂಕ : 7/11/2023 ಕುಂದುಕೊರತೆ ನಡೆಸಲಾಗಿರುತ್ತದೆ. |
| 11 | ಧಾರವಾಡ | - |
| 12 | ದಕ್ಷಿಣ ಕನ್ನಡ | ದಿನಾಂಕ:16.01.2023, ದಿನಾಂಕ:13.02.2024 ಮತ್ತು ದಿನಾಂಕ: 11.11.2024ರಂದು ಕುಂದು ಕೊರತೆ ಸಭೆಗಳನ್ನು ನಡೆಸಲಾಗಿರುತ್ತದೆ. |
| 13 | ದಾವಣಗೆರೆ | ಜಿಲ್ಲಾಧಿಕಾರಿಗಳ ಸೂಚನೆ ಮೇರೆಗೆ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ದಾವಣಗೆರೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:23.08.2024ರಂದು ಜಿಲ್ಲಾ ವಾಕ್ ಮತ್ತು ಶ್ರವಣದೋಷವುಳ್ಳ ಹಾಗೂ ವಿಕಲಚೇತನರ ಕುಂದು ಕೊರತೆ ಸಭೆಯನ್ನು ನಡೆಸಲಾಗಿದೆ. |
| 14 | ಕಲಬುರಗಿ | 2024-25ನೇ ಸಾಲಿನಲ್ಲಿ ಅಂಗವಿಕಲರ ಕುಂದು ಕೊರತೆ ಸಭೆಗಳು ನಡೆದಿರುವುದಿಲ್ಲ. |
| 15 | ಗದಗ | 2024-25ನೇ ಸಾಲಿನಲ್ಲಿ ಅಂಗವಿಕಲರ ಕುಂದು ಕೊರತೆ ಸಭೆಗಳು ನಡೆದಿರುವುದಿಲ್ಲ. |

| | | |
|---|---|---|
| 16 | ಹಾಸನ | ಹಾಸನ ಜಿಲ್ಲೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪ್ರತಿ ತಿಂಗಳ 3ನೇ ಸೋಮವಾ.. .ಸಭೆ ನಡೆಸಲು ಸಾಧ್ಯವಾಗದಿದ್ದರೂ ಸಹ ದಿನಾಂಕ:12.06.2023 ಹಾಗೂ ದಿನಾಂಕ:29.07.2024ರಂದು ಸಭೆ ನಡೆಸಲಾಗಿರುತ್ತದೆ. |
| 17 | ಹಾವೇರಿ | -- |
| 18 | ಕೊಡಗು | 04/01/2023ರಂದು ಸಭೆ ನಡೆಸಲಾಗಿದೆ. |
| 19 | ಕೋಲಾರ | ಮಾನ್ಯ ಜಿಲ್ಲಾಧಿಕಾರಿಗಳಿಂದ ಮೌಖಿಕವಾಗಿ ಅನುಮತಿ ಪಡೆದು ಮಾನ್ಯ ಜಿಲ್ಲಾಧಿಕಾರಿಗಳಿಂದ ಮಾರ್ಗದರ್ಶನದಲ್ಲಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವತಿಯಿಂದ ದಿನಾಂಕ:05.12.2023 ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಾರ್ಯಲಯ, ಜಿಲ್ಲಾಡಳಿತ ಭವನ, ಕಂಬಾರಹಳ್ಳಿ, ಟಮಕ, ಕೋಲಾರ ಇಲ್ಲಿ ಜಿಲ್ಲಾ ಮಟ್ಟದ ವಿಕಲಚೇತನರ ಕುಂದು ಕೊರತೆ ಸಭೆ ನಡೆಸಲಾಯಿತು.ಸಭೆಯಲ್ಲಿ 18 ವರ್ಷ ಮೇಲ್ಪಟ್ಟ ವಿಕಲಚೇತನರು ದಿನಾಂಕ:09.12.2023ರ ರೊಳಗೆ ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡಲು ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ MRW ರವರಿಗೆ ಸೂಚಿಸಲಾಯಿತು ಮತ್ತು ಮತದಾರರ ಪಟ್ಟಿಯಲ್ಲಿ ಹೊಸ ಸೇರ್ಪಡೆಯಾಗಲಿರುವ ವಿಕಲಚೇತನರ ಮಾಹಿತಿಯನ್ನು ಕೂಡಲೇ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ತಲುಪಿಸುವಂತೆ ಸೂಚಿಸಲಾಯಿತು. ವಿವಿಧ ವಾಟ್ಸ್ ಗ್ರೂಪ್ ಮುಖಾಂತರ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಬಗ್ಗೆ ಪ್ರಚಾರ ನೀಡಲು ಸೂಚಿಸಲಾಯಿತು. ಯೋಜನೆಗಳ ಕುರಿತು ಕರಪತ್ರಗಳ ಮುಖಾಂತರ ಅರಿವು ಮೂಡಿಸುವುದರ ಕುರಿತು ಚರ್ಚಿಸಲಾಯಿತು ಯುಡಿಐಡಿ ಕಾರ್ಡ್ ವಿತರಣೆಯನ್ನು ಸಮರ್ಪಕ ಮಾಡಿಸುವುದರ ಕುರಿತು ಚರ್ಚಿಸಲಾಯಿತು ಹಾಗೂ ಇಲಾಖಾ ಸೌಲಭ್ಯಗಳ ಕುರಿತು ವ್ಯಾಪಕಪ್ರಚಾರ ನೀಡುವುದರ ಕುರಿತು ಚರ್ಚಿಸಲಾಯಿತು. |
| 20 | ಕೊಪ್ಪಳ | ಕೊಪ್ಪಳ ಜಿಲ್ಲೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ 2023-24ನೇ ಸಾಲಿನಲ್ಲಿ ಕುಂದುಕೊರತೆ ಸಭೆ ನಡೆದಿರುವುದಿಲ್ಲ. |
| 21 | ಮೈಸೂರು | ದಿನಾಂಕ:22.11.2023ರಂದು ಮಾನ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆರವರ ಅಧ್ಯಕ್ಷತೆಯಲ್ಲಿ ಕುಂದು ಕೊರತೆ ಸಭೆಯನ್ನು ನಡೆಸಲಾಗಿರುತ್ತದೆ. |
| 22 | ಮಂಡ್ಯ | ಪ್ರತಿ ತಿಂಗಳು ಕುಂದು ಕೊರತೆ ಸಭೆ ನಡೆಸಲು ಕ್ರಮವಹಿಸಿದೆ. |
| 23 | ರಾಯಚೂರು | ಕಳೆದ ಸಾಲಿನಲ್ಲಿ ಕುಂದು ಕೊರತೆ ಸಭೆ ಏರ್ಪಡಿಸಿರುವುದಿಲ್ಲ. |
| 24 | ಶಿವಮೊಗ್ಗ | ದಿನಾಂಕ:10.04.2024ರಂದು ಸಭೆ ನಡೆಸಲಾಗಿರುತ್ತದೆ. |
| 25 | ತುಮಕೂರು | ಕಳೆದ ಸಾಲಿನಲ್ಲಿ ಕುಂದು ಕೊರತೆ ಸಭೆ ನಡೆದಿರುವುದಿಲ್ಲ. |
| 26 | ಉತ್ತರಕನ್ನಡ | ಕಳೆದ ಸಾಲಿನಲ್ಲಿ ಕುಂದು ಕೊರತೆ ಸಭೆ ನಡೆದಿರುವುದಿಲ್ಲ. |
| 27 | ಉಡುಪಿ | ದಿನಾಂಕ:19/11/2024 ರಂದು ಉಡುಪಿ ಜಿಲ್ಲೆಯ ಕುಂದಾಪುರ ಹಾಗೂ ಬೈಂದೂರು ತಾಲೂಕಿನ ವಿಕಲಚೇತನರ ತಾಲುಕು ಮಟ್ಟದ ಕುಂದು ಕೊರತೆ ಸಭೆಯನ್ನು ತಹಶೀಲ್ದಾರ್ ರವರ ಅಧ್ಯಕ್ಷತೆಯಲ್ಲಿ ನಡೆಸಲಾಗಿದ್ದು, ಸಭೆಯ ನಡವಳಿಯನ್ನು ಮಾನ್ಯ ಜಿಲ್ಲಾಧಿಕಾರಿಯವರಿಗೆ ಮಂಡಿಸಲಾಗಿದೆ. |
| 28 | ರಾಮನಗರ | 2023-24ನೇ ಸಾಲಿನಲ್ಲಿ ಕುಂದು ಕೊರತೆ ಸಭೆ ನಡೆದಿರುವುದಿಲ್ಲ. |
| 29 | ಚಿಕ್ಕಬಳ್ಳಾಪುರ | ದಿನಾಂಕ:30.10.2023 ಮತ್ತು ದಿನಾಂಕ:16.07.2024ರಂದು ಸಭೆ ನಡೆಸಲಾಗಿರುತ್ತದೆ. |
| 30 | ಯಾದಗಿರಿ | ದಿನಾಂಕ:15.11.2023 ಮತ್ತು ದಿನಾಂಕ:18.07.2024ರಂದು ಸಭೆ ನಡೆಸಲಾಗಿರುತ್ತದೆ. |
| 31 | ವಿಜಯನಗರ | 2024-25ನೇ ಸಾಲಿನಲ್ಲಿ ದಿನಾಂಕ:07.08.2024 ಮತ್ತು 20.11.2024ರಂದು 2 ಸಭೆಗಳನ್ನು ಏರ್ಪಡಿಸಲಾಗಿದೆ. |

ಅನುಬಂಧ-2

ಕರ್ನಾಟಕ ಸರ್ಕಾರ

ಕಂಇ 499 ಬಿಎಂಎಂ 06

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ,10-08-07

ಸುತ್ತೋಲೆ

ವಿಷಯ:- ಅಂಗವಿಕಲರ ಕುಂದುಕೊರತೆಗಳನ್ನು ನಿವಾರಿಸುವ ಬಗ್ಗೆ ಪ್ರತಿ ತಿಂಗಳ 3ನೇ ಸೋಮವಾರದಂದು ಸಭೆ ನಡೆಸುವ ಬಗ್ಗೆ

-/-

ರಾಜ್ಯದಲ್ಲಿ ಅಂಗವಿಕಲರ ಅಧಿನಿಯಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕುರಿತಂತೆ ಈಗಾಗಲೇ ಸರ್ಕಾರದ ಸುತ್ತೋಲೆ ಸಂಖ್ಯೆ ಕಂಇ 482 ಬಿಎಂಎಂ 2004(ಭಾ) ದಿನಾಂಕ 26-2-2005 ರಲ್ಲಿ ಸ್ಪಷ್ಟ ನಿರ್ದೇಶನ ನೀಡಲಾಗಿದೆ. ರಾಜ್ಯದಲ್ಲಿರುವ ಅಂಗವಿಕಲರ ಕುಂದುಕೊರತೆಗಳನ್ನು ಶೀಘ್ರ ಇತ್ಯರ್ಥಗೊಳಿಸುವ ಉದ್ದೇಶದಿಂದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ತ್ವರಿತ ಕ್ರಮ ತೆಗೆದುಕೊಳ್ಳುವುದು ಸೂಕ್ತ ಎಂದು ಸರ್ಕಾರ ಮನಗಂಡಿರುವುದರಿಂದ ಇನ್ನು ಮುಂದೆ ಎಲ್ಲಾ ಜಿಲ್ಲಾಧಿಕಾರಿಗಳು ಸೂಕ್ತ ಪ್ರಚಾರ ನೀಡಿ ಪ್ರತಿ ತಿಂಗಳ 3ನೇ ಸೋಮವಾರದಂದು ಅಂಗವಿಕಲರ ಕುಂದುಕೊರತೆಗಳ ಸಭೆ ನಡೆಸಿ ಅವರ ಕುಂದು ಕೊರತೆಗಳನ್ನು ಶೀಘ್ರ ಪರಿಹರಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಕೋರಲಾಗಿದೆ.

ಹಾಗೂ ಈ ಕುರಿತು ಸಾಧಿಸಿದ ಪ್ರಗತಿಯ ಪರಿಶೀಲನೆಯ ವರದಿಯನ್ನು ಆಯುಕ್ತರು, ರಾಜ್ಯ ಅಂಗವಿಕಲ ವ್ಯಕ್ತಿಗಳ ಕಛೇರಿ, ನಂ 40, ತಂಬುಚೆಟ್ಟಿ ರಸ್ತೆ, ಕಾಕ್ಸ್ ಟೌನ್, ಬೆಂಗಳೂರು - 560 005 ಇವರಿಗೆ ಕಳುಹಿಸಿ ಅದರ ಪ್ರತಿಯನ್ನು ಕಂದಾಯ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೂ ಮಾಹಿತಿಗಾಗಿ ಕಳುಹಿಸಿಕೊಡುವಂತೆ ಕೋರಲಾಗಿದೆ.

10/8/07
(ರಾಮಚಂದ್ರಯ್ಯ),
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ, (ಸೇವೆಗಳು)

ಗೆ:

1) ಪ್ರಾದೇಶಿಕ ಆಯುಕ್ತರು, ಮೈಸೂರು,ಬೆಂಗಳೂರು,ಗುಲ್ಬರ್ಗಾ ಮತ್ತು ಬೆಳಗಾಂ
2) ಎಲ್ಲಾ ಜಿಲ್ಲಾಧಿಕಾರಿಗಳಿಗೆ
3) ಎಲ್ಲಾ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್
4) ಆಯುಕ್ತರು,ಅಂಗವಿಕಲ ಅಧಿನಿಯಮ ಕಛೇರಿ, ನಂ.40, ತುಂಬುಚೆಟ್ಟಿ ರಸ್ತೆ ಕಾಕ್ಸ್ ಟೌನ್, ಬೆಂಗಳೂರು - 560 065
5) ಸರ್ಕಾರದ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-1
6) ಎಲ್ಲಾ ಸಹಾಯಕ ಆಯುಕ್ತರುಗಳಿಗೆ